<u>ದಿನಾಂಕಃ 25.1.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.</u>

## ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎಸ್ ಎಲ್ ಕೆ ಅವರಿಂದ–

1. 7 ನೇ ಪ್ರತಿವಾದಿ ಕಂಪನಿ ದಿಯಾ ಇನ್ಫ್ರಾಟೆಕ್ ಪ್ರೈವೇಟ್ ಲಿ. ನಲ್ಲಿ ನಾನು ಏನೂ ಆಗಿರುವುದಿಲ್ಲ. ಅದು ಪ್ರೈವೇಟ್ ಲಿ. ಕಂಪನಿ ಎಂದರೆ ಸರಿ. ಅದು ಕಂಪನಿಸ್ ಆಕ್ಟ್ ಅಡಿಯಲ್ಲಿ ನೊಂದಣಿಯಾಗಿರುತ್ತದೆ. ಅದು ನೊಂದಣಿಯಾಗಿದ್ದರೆ ಅದರ ಆರ್ಟಿಕಲ್ ಆಫ್ ಅಸೋಯೇಷನ್ಸ್ ಹಾಗೂ ಮೆಮೊರಂಡಮ್ ಆಫ್ ಅಸೋಯೆಷನ್ಸ್ ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಕಂಪನಿಯಲ್ಲಿ 3 ಜನ ಡೈರೆಕ್ಟರ್ಗಳು ಇದ್ದಾರೆ. ಅವರ ಹೆಸರುಗಳು 1. ರಾಮಚಂದ್ರೇಗೌಡ 2. ರಾಜು 3. ಪ್ರತಿಜ್ಞಾ.

2. ನನಗೆ ಜಿಪಿಎ ಅನ್ನು ರಾಮಚಂದ್ರೇಗೌಡರು ನೀಡಿದ್ದು, ಅವರು ಸದರಿ ಕಂಪನಿಯ ಡೈರೆಕ್ಟರ್ ಮಾತ್ರ ಆಗಿರುತ್ತಾರೆ. ಸದರಿ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಯಾರು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯ ಬಗ್ಗೆ ಸದರಿ 3 ಡೈರೆಕ್ಟರ್ ಗಳಿಗೆ ಮಾಹಿತಿ ಇದೆ ಎಂದರೆ ಸರಿ. ಪ್ರಸ್ತುತ ದಾವೆಯ ಸಮನ್ಸ್ ಪಡೆದ ನಂತರ ಸದರಿ ಕಂಪನಿಯಲ್ಲಿ ರೆಸೆಲ್ಯೂಷನ್ ಆಗಿರುತ್ತದೆ. ನಂತರ ನನ್ನನ್ನು ಜಿಪಿಎ ಓಲ್ಡ್ ರ್ ಆಗಿ ಮಾಡಲು 7 ನೇ ಪ್ರತಿವಾದಿ ಕಂಪನಿಯಲ್ಲಿ ರೆಸೆಲ್ಯೂಷನ್ ಆಗಿರುತ್ತದೆ. ಮೊದಲನೆ ರೆಸೆಲ್ಯೂಷನ್ ಆಗಿರುವ ದಿನಾಂಕ ನನಗೆ ನೆನಪಿಲ್ಲ. ಎರಡನೇ ರೆಸೆಲ್ಯೂಷನ್ ಆಗಿರುವ ದಿನಾಂಕ ನನಗೆ ನೆನಪಿಲ್ಲ. ಸದರಿ ರೆಸೆಲ್ಯೂಷನ್ ಗಳ ಪ್ರತಿ ಹಾಜರುಪಡಿಸಲು ತೊಂದರೆ ಇಲ್ಲ.

3. ನಾನು 7 ನೇ ಪ್ರತಿವಾದಿ ಕಂಪನಿಯಲ್ಲಿ ಸಿಬ್ಬಂದಿಯು ಅಲ್ಲ ಹಾಗೂ ಅವರಿಗೆ ಯಾವುದೇ ರೀತಿಯ ಸಂಬಂಧಪಟ್ಟವನಾಗಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಕಂಪನಿಯವರ ರೆಷಲ್ಯೂಷನ್ ಇಲ್ಲದೆ, ಕೇವಲ ರಾಮಚಂದ್ರೇಗೌಡ ಒಬ್ಬರಿಗೆ ನನ್ನ ಹೆಸರಿಗೆ ಜಿಪಿಎ ಬರೆದುಕೊಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ.26 ರಲ್ಲಿ ನಮ್ಮ ರೆಸೆಲ್ಯೂಷನ್ ಸಂಖ್ಯೆ ಹಾಗೂ ಮಿನಟ್ ಪುಸ್ತಕದ ಸಂಖ್ಯೆ ನಮೂದಾಗಿಲ್ಲ ಎಂದರೆ

ಸರಿ. ನಿಪಿ.26 ಅನ್ನು ನೋಟರಿ ಕಚೇರಿಯಲ್ಲಿ ಬರೆಯಿಸಿ ನಂತರ 7 ನೇ ಪ್ರತಿವಾದಿ ಕಂಪನಿಯಲಿ ನನಗೆ ನೀಡಿರುತ್ತಾರೆ.

4. 7 ನೇ ಪ್ರತಿವಾದಿ ಕಂಪನಿಯ ಹೆಡ್-ಆಫೀಸ್ ಮೈಸೂರಿನ ಬೋಗಾದಿಯಲ್ಲಿದೆ. ನಿಪಿ.26 ರಲ್ಲಿ ಕಂಪನಿಯ ಹೆಡ್-ಆಫೀಸ್ ಮೈಸೂರಿನ ಬೋಗಾದಿಯಲ್ಲಿದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಡೈರೆಕ್ಟರ್ ವಿಳಾಸ ನಮೂದು ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

5. 7 ನೇ ಪ್ರತಿವಾದಿ ಕಂಪನಿಯ ವಿರುದ್ಧ ಪ್ರಸ್ತುತ ನ್ಯಾಯಾಲಯದಲ್ಲಿ ಹಾಗೂ ಮೈಸೂರಿನ ಬೇರೆ-ಬೇರೆ ನ್ಯಾಯಾಲಯಗಳಲ್ಲಿ ಎಷ್ಟು ವ್ಯಾಜ್ಯಗಳಿವೆ ಎಂದರೆ ನನಗೆ ಗೊತ್ತಿರುವ ಹಾಗೆ ಪ್ರಸ್ತುತ ನ್ಯಾಯಾಲಯದಲ್ಲಿ ಬಿಟ್ಟು ಬೇರೆ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ನಾನು ರಾಮಚಂದ್ರೇಗೌಡರ ಜೊತೆ ವಿಚಾರಣೆ ಮಾಡಿಲ್ಲ. ಪ್ರಸ್ತುತ ದಾವಾ ಆಸ್ತಿಗೆ ಬಿಟ್ಟು ನಾನು 7 ನೇ ಪ್ರತಿವಾದಿ ಕಂಪನಿಯ ಬೇರೆ ಯಾವುದೇ ಆಸ್ತಿಗೆ ಜಿಪಿಎ ಪಡೆದಿಲ್ಲ.

**6.** ಪ್ರಸ್ತುತ ದಾವೆಯಲ್ಲಿ ಯಾವ ಕಾರಣಕ್ಕಾಗಿ 7 ನೇ ಪ್ರತಿವಾದಿ ಕಂಪನಿ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆಗೆ ಪ್ರಸ್ತುತ ದಾವಾ ಆಸ್ತಿಗಳನ್ನು ನಾನೇ ಡೀಲ್ ಮಾಡಿ ಖರೀದಿ ಮಾಡಿಸಿದ್ದರಿಂದ ನನಗೆ ಮಾಹಿತಿ ಇದೆ ಎಂದು ನನಗೆ ಜಿಪಿಎ ನೀಡಿರುತ್ತಾರೆ.

**7.** **2** ರಿಂದ **6** ನೇ ಪ್ರತಿವಾದಿಗಳ ಪರವಾಗಿ ಜಿಪಿಎ ಪಡೆದು ನಾನು 7 ನೇ ಪ್ರತಿವಾದಿಗೆ ನಾನು ಯಾವುದೇ ಆಸ್ತಿ ಮಾರಾಟ ಮಾಡಿಲ್ಲ. 7 ನೇ ಪ್ರತಿವಾದಿ ಕಂಪನಿಯ 3 ಜನ ಡೈರೆಕ್ಟರ್ ಗಳು ಆರೋಗ್ಯವಾಗಿದ್ದಾರೆ. ಸದರಿಯವರು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಲು ದೈಹಿಕ-ಮಾನಸಿಕವಾಗಿ ಆರೋಗ್ಯವಾಗಿದ್ದಾರೆ ಎಂದರೆ ಸರಿ. ಪ್ರಸ್ತುತ ದಾವೆಯ ಆಸ್ತಿ ವಿಚಾರವಾಗಿ ಸದರಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ

ನುಡಿದರೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಬಹುದು ಎಂದು ನನಗೆ ಜಿಪಿಎ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

8. ಈ ಹಿಂದೆ ಇದೇ ದಾವೆಯಲ್ಲಿ ನಾನು 2 ರಿಂದ 6 ನೇ ಪ್ರತಿವಾದಿಗಳ ಪರವಾಗಿ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. 2 ರಿಂದ 6 ನೇ ಪ್ರತಿವಾದಿಗಳು ಜಿಪಿಎ ಮಾತ್ರ ನನಗೆ ಕೊಟ್ಟಿದ್ದು, ಪ್ರತಿವಾದ ಪತ್ರಕ್ಕೆ ಅವರೇ ಸಹಿ ಮಾಡಿರುತ್ತಾರೆ. ನಿಪಿ.26 ಕ್ಕೆ ಕೇವಲ ರಾಮಚಂದ್ರೇಗೌಡರು ಮಾತ್ರ ಸಹಿ ಮಾಡಿದ್ದು, ಬೇರೆ ಡೈರೆಕ್ಟರ್ ಗಳು ಸಹಿ ಮಾಡಿಲ್ಲ. 2 ರಿಂದ 6 ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನೆ 7 ನೇ ಪ್ರತಿವಾದಿ ಸಲ್ಲಿಸಿರುತ್ತಾರೆ ಎಂದರೆ ಸರಿ.

9. 2 ರಿಂದ 7 ನೇ ಪ್ರತಿವಾದಿಗಳು ವಾದಿಗಳ ಕುಟುಂಬಕ್ಕೆ ಸಂಬಂಧಪಟ್ಟವರಲ್ಲ ಎಂದರೆ ಸರಿ. ಸರ್ವೇ ನಂ. 88/1 ಹಾಗೂ ಸರ್ವೇ ನಂ.85/1 ದೊಡ್ಡಕಾಡನಹಳ್ಳಿ ಗ್ರಾಮಕ್ಕೆ ಸೇರಿರುತ್ತವೆ. ಸರ್ವೇ ನಂ.88/1 ರಲ್ಲಿ 2 ಎಕರೆ 6 ಗುಂಟೆ ಜಮೀನು ಹಾಗೂ ಸರ್ವೇ ನಂ.85/1 ರಲ್ಲಿ 1 ಎಕರೆ 38 ಗುಂಟೆ ಜಮೀನುಗಳಿವೆ. ಇದು ಖರಾಬು ಬಿಟ್ಟು ಹೇಳುವ ವಿಸ್ತೀರ್ಣ ಆಗಿರುತ್ತದೆ. ಸದರಿ ಎರಡು ಜಮೀನುಗಳು ಅಕ್ಕಪಕ್ಕದಲ್ಲಿವೆ ಎಂದರೆ ಸರಿ.

10. ನಿಡಿ.27 ಕ್ರಯಪತ್ರ ಆರ್.ರಾಮಸ್ವಾಮಿ ಎಂಬುವವರು ಟಿ. ಕೃಷ್ಣ ಅವರ ಪರವಾಗಿ ಬರೆದುಕೊಟ್ಟ ಕ್ರಯಪತ್ರ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನಾನು ಓದಿಕೊಂಡಿರುತ್ತೇನೆ. ಸದರಿ ನಿಡಿ.27 ಕ್ರಯಪತ್ರವನ್ನು ರಾಮಸ್ವಾಮಿ ಅವರು ಎಮ್ ಪಿ ಜಾರ್ಜ್ ಹಾಗೂ ಇತರರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ನಿಡಿ.27 ಕ್ರಯಪತ್ರದಲ್ಲಿ ಸರ್ವೇ ನಂ.88/1, 83/2 ಬಿ, 83/1, 82 ನಾಲ್ಕು ಸರ್ವೇ ನಂಬರುಗಳ ಜಮೀನುಗಳನ್ನು ರಾಮಸ್ವಾಮಿ ಅವರು 2 ರಿಂದ 6 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಸದರಿ ಜಮೀನುಗಳು ರಾಮಚಂದ್ರ ಅವರಿಗೆ ಯಾರ್ಯಾರಿಂದ ಬಂದಿರುತ್ತದೆ ಎಂದು ನಮೂದು ಮಾಡಿರುತ್ತಾರೆ.

**11.** ಸರ್ವೇ ನಂ.**83/2** ಜಮೀನು ದೇವಮ್ಮ ಅವರಿಂದ ಟಿ. ನಾರಾಯಣಸ್ವಾಮಿ ಅವರು ಖರೀದಿ ಮಾಡಿರುತ್ತಾರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಿಃ23.04.1980 ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸರ್ವೇ ನಂ.83/1 ಜಮೀನನ್ನು ನಿಂಗಮ್ಮ ಅವರಿಂದ ಟಿ. ನಾರಾಯಣಸ್ವಾಮಿ ಅವರು ಖರೀದಿ ಮಾಡಿರುತ್ತಾರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸರ್ವೇ ನಂ.82 ಜಮೀನು ಲಿಂಗಪ್ಪ ಅಲಿಯಾಸ್ ಸಣ್ಣಪ್ಪ ಅವರಿಂದ ಟಿ. ನಾರಾಯಣಸ್ವಾಮಿ ಅವರು ಖರೀದಿ ಮಾಡಿರುತ್ತಾರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ.

12. ಆದರೆ ಸರ್ವೇ ನಂ.88/1 ಜಮೀನು ಟಿ. ನಾರಾಯಣಸ್ವಾಮಿ ಅವರು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನಿಡಿ.27 ರಲ್ಲಿ ನಮೂದಾಗಿಲ್ಲ ಎಂದರೆ ಸರಿ. 1980 ರ ಸಮಯದಲ್ಲಿ 2 ರಿಂದ 6 ನೇ ಪ್ರತಿವಾದಿಗಳು ಕೃಷಿಕರಾಗಿರಲಿಲ್ಲ ಎಂದರೆ ಅವರು ಕಾಫಿ ಪ್ಲಾಂಟರ್ಸ್ ಹಾಗೂ ಇನ್ವೆಸ್ಟರ್ಸ್ ಆಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆ ಸಮಯದಲ್ಲಿ ಕೃಷಿಕರಾಗಿಲ್ಲದೆ ಇದ್ದವರು ಕರ್ನಾಟಕ ಭೂ-ಸುಧಾರಣಾ ಕಾಯಿದೆ ಅಡಿಯಲ್ಲಿ ಜಮೀನು ಖರೀದಿ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಇರಬಹುದು. ಆದ್ದರಿಂದ ಅವರು ಮಾನ್ಯ ಎ.ಸಿ. ಅವರಿಂದ ಅನುಮತಿ ಪಡೆದು ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿ.

**13.** ಟಿ. ನಾರಾಯಣಸ್ವಾಮಿ ಅವರು ದಾವಾ ಸ್ವತ್ತನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಟಿ. ನಾರಾಯಣಸ್ವಾಮಿ ಅವರು 1 ನೇ ಪ್ರತಿವಾದಿಗೆ ಯಾವುದೇ ನೊಂದಾಯಿತ ವ್ಯವಸ್ಥಾ ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ.

14. ರೆವೆನ್ಯೂ ಅಪೀಲು ಸಂಖ್ಯೆ 103 ರಿಂದ 106/1979-80 ಪ್ರಕರಣಗಳಲ್ಲಿ ಎ.ಸಿ. ಅವರ ಆದೇಶದ ಪ್ರತಿಗಳನ್ನು ನಾವು ಹಾಜರುಪಡಿಸಿಲ್ಲ. ಸದರಿ ಆದೇಶ ಮೇಲೆ ಹೇಳಿದ ಸರ್ವೇ ನಂಬರುಗಳಿಗೆ ಸಂಬಂಧಪಟ್ಟಂತೆ ಇರುತ್ತವೆ ಎಂದರೆ ಸರಿ. ಸರ್ವೇ ನಂ.**88/1** ಹಾಗೂ **85/1** ಕ್ಕೆ ಸಂಬಂಧಪಟ್ಟಂತೆ ಎ.ಸಿ. ಅವರ ಯಾವ ಪ್ರಕರಣದ

ಆದೇಶದಲ್ಲಿ ಸದರಿ ಜಮೀನುಗಳ ಬಗ್ಗೆ ಆದೇಶ ಮಾಡಲಾಗಿದೆ ಎಂದು ಹೇಳಲು ಆಗುವುದಿಲ್ಲ.

15. ದಿಃ24.03.1980 ರಲ್ಲಿ ಕ್ರಯಪತ್ರ ಬರೆದುಕೊಡುವ ಸಮಯದಲ್ಲಿ ಟಿ. ನಾರಾಯಣಸ್ವಾಮಿ ಅವರು ದಾವಾ ಸ್ವತ್ತು ಅಲ್ಲದೆ ಸುಮಾರು 14 ಸರ್ವೇ ನಂಬರುಗಳ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರದ ಸಮಯದಲ್ಲಿ ಇ.ಸಿ. ಪಡೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರ ಆದ ನಂತರ 2 ರಿಂದ 6 ನೇ ಪ್ರತಿವಾದಿಗಳ ಹೆಸರಿನಲ್ಲಿ ಎಮ್.ಆರ್ ಹಾಗೂ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖಾತೆ ಸದರಿ ಕ್ರಯಪತ್ರ ಆದ ಎಷ್ಟು ವರ್ಷ ಅಥವಾ ತಿಂಗಳ ನಂತರ ಆಗಿರುತ್ತದೆ ನನಗೆ ಗೊತ್ತಿಲ್ಲ. ಎ.ಸಿ. ಅವರ ಆದೇಶದ ನಂತರ ಸದರಿ ಜಮೀನಿನ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ.

16. ರಾಮಸ್ವಾಮಿ ಅವರಿಗೆ ಜಿಪಿಎ ಬರೆದುಕೊಡುವ ಸಮಯ 1 ನೇ ಪ್ರತಿವಾದಿಗೆ ಹಾಗೂ ಟಿ. ನಾರಾಯಣಸ್ವಾಮಿ ಅವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಯಾವುದೇ ಟೈಟಲ್-ಡೀಡ್ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಹಕ್ಕು ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

17. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಆಸ್ತಿ ಮೇಲೆ ಯಾವುದೇ ಹಕ್ಕಿಲ್ಲದೆ ಇದ್ದಾಗ ಇನ್ನೊಬ್ಬರಿಗೆ ಸದರಿ ಆಸ್ತಿಯನ್ನು ವರ್ಗಾವಣೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಯಾವುದೇ ಆಸ್ತಿ ಖರೀದಿ ಮಾಡಲು 30 ವರ್ಷದ ಇ.ಸಿ. ಪಡೆಯುತ್ತಾರೆ ಎಂದರೆ ಇರಬಹುದು. ಇ.ಸಿ. ಪಡೆಯುವ ಉದ್ದೇಶ ಸದರಿ ಜಮೀನನ್ನು ಯಾರು-ಯಾರು ಮಾಡುತ್ತಿದ್ದರು ಎಂದು ತಿಳಿದುಕೊಳ್ಳುವುದು ಆಗಿರುತ್ತದೆ.

18. 2 ರಿಂದ 6 ಹಾಗೂ 7 ನೇ ಪ್ರತಿವಾದಿಗಳು ಈ ಬಗ್ಗೆ ಯಾವುದೇ ಇ.ಸಿ. ಪಡೆಯುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿಯವರು ಎಮ್ ಆರ್ ಪಡೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಪಡೆದಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

19. ವಾದಿಗಳ ತಂದೆ– ದೊಡ್ಡಪ್ಪ– ಚಿಕ್ಕಪ್ಪ ಹಾಗೂ ಟಿ.ನಾರಾಯಣ ಸ್ವಾಮಿ ಮಧ್ಯೆ ಭೋಗ್ಯದ ವ್ಯವಹಾರ ನಡೆದಿರುವ ಬಗ್ಗೆ 2 ರಿಂದ 7 ನೇ ಪ್ರತಿವಾದಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸರ್ವೇ ನಂ.85/1 ಟಿ.ನಾರಾಯಣ ಸ್ವಾಮಿ ಅವರಿಗೆ ಸೇರಿದ್ದು ಎಂದು ಆರ್ ಟಿ ಸಿ ನೋಡಿದ್ದೇನೆ ಆದರೆ ಅವರ ಟೈಟಲ್ ಡೀಡ್ ನಾನು ನೋಡಿಲ್ಲ. ಸದರಿ ಜಮೀನು ಟಿ.ನಾರಾಯಣ ಸ್ವಾಮಿ ಅವರಿಗೆ ಹೇಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

20. ದಾವಾ ಸ್ವತ್ತು ವಾದಿಯರ ಪಿತ್ರಾರ್ಜಿತ ಆಸ್ತಿ ಹಾಗೂ ಅವಿಭಕ್ತ ಕುಟುಂಬಕ್ಕೆ ಸೇರಿದ ಆಸ್ತಿಯಾಗಿದ್ದು, ಅದರಲ್ಲಿ ಟಿ.ನಾರಾಯಣ ಸ್ವಾಮಿ ಅವರಿಗಾಗಲಿ 1 ಅಥವಾ 7 ನೇ ಪ್ರತಿವಾದಿಗೆ ಯಾವುದೇ ಹಕ್ಕಿಲ್ಲ ಎಂದರೆ ಸುಳ್ಳು. ಅಲಿನೇಷನ್ ಆದರೂ ಸಹ ಆಸ್ತಿಯ ಸ್ವರೂಪ ಹಾಗೂ ಹಕ್ಕಿನ ಸ್ವರೂಪ ಬದಲಾವಣೆ ಆಗುವುದಿಲ್ಲ ಎಂದರೆ ಸರಿಯಲ್ಲ.

21. ವಾದಿಯರು ಅನಕ್ಷರಸ್ಥರು ಹಾಗೂ ಅವಿದ್ಯಾವಂತರು ಅವರಿಗೆ ವ್ಯವಹಾರ ಜ್ಞಾನ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಈಗಲೂ ಸಹ ದಾವಾ ಜಮೀನಿನ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸುಳ್ಳು. ನಾನು ಜಮೀನಿನ ಬಳಿ ದಿನಾ ಹೋಗುತ್ತೇನೆ. ನಾನು ನಮ್ಮ ಜಮೀನಿನ ಭಾವಚಿತ್ರ ನೋಡಿದರೆ ಗುರುತಿಸುತ್ತೀರಾ ಎಂಬ ಪ್ರಶ್ನೆಗೆ ಭಾವಚಿತ್ರ ನೋಡಿದರೆ ಗುರುತಿಸಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

22. ಈ ಹಂತದಲ್ಲಿ ಸಾಕ್ಷಿದಾರರಿಗೆ ಭಾವಚಿತ್ರಗಳನ್ನು ತೋರಿಸಿ, ಸದರಿ ಜಮೀನುಗಳು ವ್ಯವಸಾಯದ ಜಮೀನುಗಳಾ ಅಥವಾ ಡೆವೆಲಪ್ಡ್ ಜಮೀನುಗಳಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅಲಿನೇಷನ್ ಆದ ನಂತರ ಡೆವೆಲಪ್ ಆದ ನಂತರ ವಾದಿಯರು ದಾವಾ

ಜಮೀನಿಗೆ ಹೋಗಿ ಉಳುಮೆ ಮಾಡುತ್ತಿದ್ದಾರೆ ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಭಾವಚಿತ್ರಗಳಲ್ಲಿ ಯಾವ ಜಮೀನನ್ನು ವಾದಿ ಉಳುಮೆ ಮಾಡುತ್ತಿದ್ದಾರೆ ಎಂದು ಹೇಳಲು ಆಗುವುದಿಲ್ಲ. ವಾದಿ ಎರಡು ಸರ್ವೆ ನಂಬರುಗಳ ಜಮೀನುಗಳನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಭಾವಚಿತ್ರಗಳುವಾದಿಯರು ಉಳುಮೆ ಮಾಡುತ್ತಿರುವ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ದೂರು ನೀಡಿದ ಬಗ್ಗೆ ದಾಖಲಾತಿಗಳು ಇವೆ. ನಮಗೆ ತೊಂದರೆ ಆಗುತ್ತದೆ ಎಂದು ವಾದಿಯರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

**23.** ವಾದಿಯರು ತಮಗೆ ತಡೆಯಾಜ್ಞೆ ಸಿಕ್ಕಿದೆ ಎಂದು ದಾವಾ ಜಮೀನಿನಲ್ಲಿ ಬೋರ್ಡ್ ಹಾಕಿದ್ದರು ಈಗ ಅವುಗಳನ್ನು ಕಿತ್ತುಹಾಕಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ಭಾವಚಿತ್ರಗಳು ಇವೆ. ಸದರಿ ಬೋರ್ಡ್ ತೆಗೆದುಹಾಕಿರುವ ಬಗ್ಗೆ ಭಾವಚಿತ್ರಗಳು ಇಲ್ಲ. ಸದರಿ ಜಮೀನು ವ್ಯವಸಾಯದ ಜಮೀನಾ ಅಥವಾ ಡೆವೆಲಪ್ಡ್ ಜಮೀನಾ ಎಂಬುದರ ಬಗ್ಗೆ ಕಮೀಷನರ್ ನೇಮಿಸಲು ತೊಂದರೆ ಇಲ್ಲ. ನಿಡಿ.10 ಬಿಟ್ಟರೆ ಉಳಿದ ಯಾವುದೇ ದಾಖಲಾತಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ.

## ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.